# ತೋಟ ಉತ್ಪನ್ನಗಳ ಮಾರಾಟ ಸಹಕಾರ ಸಂಘ ನಿ.,

## ಚನ್ನಗಿರಿ –577213. ದಾವಣಗೆರೆ ಜಿಲ್ಲೆ.

---

## ಟೆಂಡರ್ ಪ್ರಕಟಣೆ

**ಟೆಂಡರ್ ಸಂಖ್ಯೆ : TUM/SER/2026-27/0001**

ಚನ್ನಗಿರಿ ತಾಲ್ಲೂಕು, ತೋಟ ಉತ್ಪನ್ನಗಳ ಮಾರಾಟ ಸಹಕಾರ ಸಂಘ ನಿ., ಸಂಸ್ಥೆಗೆ 2026–27 ನೇ ಸಾಲಿನಲ್ಲಿ ಕುಶಲ, ಅರೆಕುಶಲ, ಅಕುಶಲ ಹಾಗೂ ಭದ್ರತಾ ಸಿಬ್ಬಂದಿಗಳ ಸೇವೆ ಅವಶ್ಯಕತೆಯಿದ್ದು ಅದನ್ನು ನಿರ್ವಹಿಸಲು ಹೊರಗುತ್ತಿಗೆ ಆಧಾರದ ಮೇಲೆ ಮ್ಯಾನ್‌ಪವರ್ ಏಜೆನ್ಸಿಗೆ ಗುತ್ತಿಗೆ ನೀಡಲು ತೀರ್ಮಾನಿಸಲಾಗಿದೆ.

ಆದ್ದರಿಂದ ಕರ್ನಾಟಕ ಸರ್ಕಾರದ ಕಾರ್ಮಿಕ ಇಲಾಖೆಯಲ್ಲಿ ನೋಂದಾಯಿತ ಮಾನವ ಸಂಪನ್ಮೂಲ ಒದಗಿಸುವ ಗುತ್ತಿಗೆದಾರರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಮೇಲ್ಕಂಡ ಸಿಬ್ಬಂದಿಗಳ ಪೂರೈಕೆ ಮಾಡಲು ಬಯಸುವ ಅರ್ಹ ಗುತ್ತಿಗೆದಾರರಿಂದ **KTTP** ಅಧಿನಿಯಮ 2001 ರ ಪ್ರಕಾರ ದ್ವಿಲಕೋಟೆ ಪದ್ಧತಿಯಲ್ಲಿ ಈ ಟೆಂಡರ್ ಆಹ್ವಾನಿಸಲಾಗಿದೆ. ಸದರಿ ಟೆಂಡರ್‌ಗೆ ಸಂಬಂಧಿಸಿದಂತೆ ಕಛೇರಿಗೆ ರೂ. **500/-**ನ್ನು ಪಾವತಿಸಿ ಅರ್ಜಿಗಳನ್ನು ಪಡೆದು,ಭರ್ತಿ ಮಾಡಿದ ಟೆಂಡರ್‌ಗಳನ್ನು ದಿನಾಂಕ: 22.04.2026 ರ ಸಂಜೆ 05:00 ಗಂಟೆ ಒಳಗೆ ಸಲ್ಲಿಸಬೇಕಾಗಿರುತ್ತದೆ.

ಈ ಟೆಂಡರ್‌ಗೆ ಸಂಬಂಧಿಸಿದಂತೆ ದರಪಟ್ಟಿ ಮತ್ತ ಇತರೆ ವಿವರಗಳನ್ನು ಒಳಗೊಂಡ ಮಾಹಿತಿಯನ್ನು ಕಛೇರಿಯಿಂದ ಒದಗಿಸುವ ನಮೂನೆಯಲ್ಲಿ ಭರ್ತಿ ಮಾಡಿ ವ್ಯವಸ್ಥಾಪಕ ನಿರ್ದೇಶಕರು, ತೋಟ ಉತ್ಪನ್ನಗಳ ಮಾರಾಟ ಸಹಕಾರ ಸಂಘ ನಿ., ಚನ್ನಗಿರಿ ಇವರಿಗೆ ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸತಕ್ಕದ್ದು.

**ಷರತ್ತುಗಳು:**

1. ಮ್ಯಾನ್‌ಪವರ್ ಸಂಸ್ಥೆ/ಏಜೆನ್ಸಿಯು ಕರ್ನಾಟಕ ಸರ್ಕಾರದ ಕಾರ್ಮಿಕ ಇಲಾಖೆಯಲ್ಲಿ ನೋಂದಾಯಿತ ಸಂಸ್ಥೆಯಾಗಿದ್ದು,ಸೊಸೈಟಿ ರಿಜಿಸ್ಟ್ರೇಷನ್ ಆಕ್ಟ್, ಕಂಪನಿ ಆಕ್ಟ್, ಕೋ–ಆಪರೇಟಿವ್ ಸೊಸೈಟೀಸ್ ಆಕ್ಟ್ ನಡಿ ನೊಂದಾವಣೆಯಾಗಿರತಕ್ಕದ್ದು ಹಾಗೂ ಇ.ಪಿ.ಎಫ್. ಮತ್ತು ಇ.ಎಸ್.ಐ ನಲ್ಲಿ ನೋಂದಾಯಿಸಿಕೊಂಡು ಕೋಡ್ ಅನ್ನು ಹೊಂದಿರತಕ್ಕದ್ದು.
2. ಟೆಂಡರ್‌ದಾರರು ಹಿಂದಿನ ವರ್ಷಗಳಲ್ಲಿ ನಡೆಸಿದ ವಹಿವಾಟು ಕನಿಷ್ಠ 1,00,00,000/- (ಒಂದು ಕೋಟಿ ರೂ ಗಳಷ್ಟು) ನಡೆಸಿರುವ ಕುರಿತು ಸಿ.ಎ/ತತ್ಸಮಾನ ವಿದ್ಯಾರ್ಹತೆ ಹೊಂದಿದವರಿಂದ ದೃಢೀಕರಿಸಿಸಲ್ಪಟ್ಟ ಆಡಿಟ್ ವರದಿಗಳನ್ನು ಸಲ್ಲಿಸತಕ್ಕದ್ದು. (**Balance Sheet**).
3. 2023-24, 2024-25 ಮತ್ತು 2025-26 ನೇ ಆರ್ಥಿಕ ವರ್ಷಗಳಲ್ಲಿ ಆದಾಯ ತೆರಿಗೆ ತುಂಬಿದ ಪತ್ರ(**Income Tax Returns**)ಹಾಗೂ ಪಾನ್ ಕಾರ್ಡ್, ಛಾಯಾ ಪ್ರತಿ ದೃಢೀಕರಿಸಿ ಸಲ್ಲಿಸುವುದು.
4. ಸೇವೆಯನ್ನು ಒದಗಿಸಲು ಟೆಂಡರ್‌ನಲ್ಲಿ ತಿಳಿಸಿರುವ ಹಾಗೆ **Service Charges** ಗಳನ್ನು ಹೊರತುಪಡಿಸಿ ಉಳಿಕೆ ಪೂರ್ಣ ಗುತ್ತಿಗೆ ಹಣವನ್ನು ಕೆಲಸ ನಿರ್ವಹಿಸುವ ಗುತ್ತಿಗೆ ಕಾರ್ಮಿಕರಿಗೆ ಪಾವತಿಸಲು ಬದ್ಧರಾಗಿರಬೇಕು.
5. ಆಯ್ಕೆಯಾದ ಮಾನವ ಸಂಪನ್ಮೂಲ ಗುತ್ತಿಗೆದಾರರು ಸಂಸ್ಥೆಯೊಂದಿಗೆ ಒಡಂಬಡಿಕೆಯನ್ನು ಮಾಡಿಕೊಳ್ಳಬೇಕಾಗುತ್ತದೆ ಹಾಗೂ ಒಡಂಬಡಿಕೆಯ ಷರತ್ತುಗಳನ್ನು, ಸಂಸ್ಥೆಯ ನಿಯಮಗಳನ್ನು ಪಾಲಿಸಲು ಬದ್ಧರಾಗಿರಬೇಕಾಗುತ್ತದೆ. ಗುತ್ತಿಗೆ ಅವಧಿಯು ಪ್ರಾರಂಭಿಕ ಹಂತದಲ್ಲಿ ಒಂದು ವರ್ಷ ಅವಧಿಯದಾಗಿರುತ್ತದೆ ಹಾಗೂ ಗುತ್ತಿಗೆ ಅವಧಿ ನವೀಕರಣ/ಹೊಸದಾಗಿ ಟೆಂಡರ್ ಕರೆಯುವ ಸಂಪೂರ್ಣ ಅಧಿಕಾರ ಆಡಳಿತ ವರ್ಗದ ವಿವೇಚನೆಗೆ ಬಿಟ್ಟಿರುತ್ತದೆ. ಗುತ್ತಿಗೆ ಅವಧಿಯ ಕಾರ್ಯಾದೇಶ 12 ತಿಂಗಳ ಅವಧಿಗೆ ಚಾಲ್ತಿಯಲ್ಲಿರುತ್ತದೆ.
6. ಗುತ್ತಿಗೆ ನೌಕರರು ಕ್ಷೇತ್ರಗಳಲ್ಲಿ, ಕಛೇರಿಗಳಲ್ಲಿ ಸಿಬ್ಬಂದಿಯವರೊಂದಿಗೆ/ಸಾರ್ವಜನಿಕರೊಂದಿಗೆ ಸೌಜನ್ಯದೊಂದಿಗೆ ವರ್ತಿಸಬೇಕು. ಯಾವುದೇ ರೀತಿಯ ಅಸಭ್ಯ ವರ್ತನೆ, ದುರ್ವರ್ತನೆ, ಸಂಸ್ಥೆಯ ಹಿತಾಸಕ್ತಿಗೆ ವ್ಯತಿರಿಕ್ತವಾಗಿ ನಡೆದುಕೊಳ್ಳುವಂತಹ ಹಾಗೂ ಅಸಮರ್ಥತೆಯಿಂದ ಕೂಡಿದ ಗುತ್ತಿಗೆ ಕಾರ್ಮಿಕರನ್ನು ಬದಲಾಯಿಸಿ ಸೂಕ್ತ ವ್ಯಕ್ತಿಯನ್ನು ಒದಗಿಸಲು ಗುತ್ತಿಗೆದಾರರು ಬದ್ಧರಾಗಿರಬೇಕು.
7. ಗುತ್ತಿಗೆದಾರರು ನೇಮಕ ಮಾಡಿಕೊಂಡ ನೌಕರರು ಸಂಸ್ಥೆಗೆ ಯಾವುದೇ ರೀತಿಯ ಹಾನಿಯುಂಟು ಮಾಡಿದಲ್ಲಿ ಅದನ್ನು ಭರಿಸುವುದು ಗುತ್ತಿಗೆದಾರರ ಜವಬ್ದಾರಿಯಾಗಿರುತ್ತದೆ.
8. ಏಜೆನ್ಸಿಯು ಮಹಾನಗರ ಪಾಲಿಕೆ ನಗರಸಭೆ, ಪುರಸಭೆ ಗ್ರಾಮ ಪಂಚಾಯ್ತಿ ಮುಂತಾದ ಸ್ಥಳಿಯ ಸಂಸ್ಥೆಗಳಿಂದ ಉದ್ದಿಮ ಪರವಾನಿಗೆ ಪತ್ರದ ನಕಲನ್ನು ಸಲ್ಲಿಸುವುದು ಹಾಗೂ ಸದರಿ ಪರವಾನಿಗೆ ಚಾಲ್ತಿ ವರ್ಷಕ್ಕೆ ನವೀಕರಣವಾಗಿರಬೇಕು. (ನೋಂದಣಿಯಾಗಿ 3 ವರ್ಷ ಆಗಿರಬೇಕು).
9. ಸಂಸ್ಥೆಯ ಚುನಾಯಿತ ಸದಸ್ಯರು, ಖಾಯಂ ಸಿಬ್ಬಂದಿ, ಕಪ್ಪು ಪಟ್ಟಿಯಲ್ಲಿರುವ ಗುತ್ತಿಗೆದಾರರು ಟೆಂಡರ್‌ನಲ್ಲಿ ಭಾಗವಹಿಸಲು ಅವಕಾಶವಿರುವುದಿಲ್ಲ. ಕಪ್ಪು ಪಟ್ಟಿಯಲ್ಲಿ ಸೇರಿರದೇ ಇರುವ ಬಗ್ಗೆ ಹಾಗೂ ಚುನಾಯಿತ ಸದಸ್ಯರಲ್ಲದೇ ಇರುವ ಬಗ್ಗೆ ಲೆಟರ್ ಹೆಡ್‌ನಲ್ಲಿ ದೃಢೀಕರಣ ಸಲ್ಲಿಸುವುದು.
10. ಗುತ್ತಿಗೆದಾರರು ಆಡಳಿತ ಮಂಡಳಿ ಸೂಚಿಸಿದ ಭದ್ರತಾ ಠೇವಣಿಯನ್ನು ಸಂಘದಲ್ಲಿರಿಸಲು ಹಾಗೂ ಭದ್ರತೆಗೆ ಖಾಲಿ ಚೆಕ್ಕುಗಳನ್ನು ಒದಗಿಸಲು ಬದ್ದರಾಗಿರಬೇಕು.

## ಟೆಂಡರ್‌ನಲ್ಲಿ ಸಲ್ಲಿಸಬೇಕಾದ ದಾಖಲಾತಿಗಳು:

1. ಬಿಡ್ಡುದಾರರು ತಮ್ಮ ಸಂಸ್ಥೆಯ ಲೆಟರ್ ಹೆಡ್‌ನಲ್ಲಿ ತಮ್ಮ ಸ್ಥಿರ ದೂರವಾಣಿ/ಮೊಬೈಲ್ ಸಂಖ್ಯೆ/ಅಧಿಕೃತ ಇಮೇಲ್ ವಿಳಾಸ/ಅಂಚೆ ವಿಳಾಸವನ್ನು ಸ್ವಯಂ ದೃಢೀಕರಿಸಿ ಸಲ್ಲಿಸತಕ್ಕದ್ದು.
2. ಟೆಂಡರ್‌ದಾರರು ಮಾನವ ಸಂಪನ್ಮೂಲ ಸೇವೆ ಒದಗಿಸುವ ಸಂಬಂಧ ಕಾರ್ಮಿಕ ಕಾಯ್ದೆಗಳ ಪ್ರಕಾರ ಕಡ್ಡಾಯವಾಗಿ ನೊಂದಣಿ ಮಾಡಿರಬೇಕು.
3. ಕಾರ್ಮಿಕ ರಾಜ್ಯ ವಿಮಾ ಇಲಾಖೆಯಿಂದ ಪಡೆದ ಚಾಲ್ತಿಯಲ್ಲಿ ಇರುವ ನೋಂದಣಿ ಪತ್ರ.
4. ಭವಿಷ್ಯ ನಿಧಿ ಇಲಾಖೆಯಿಂದ ಪಡೆದ ಚಾಲ್ತಿಯಲ್ಲಿ ಇರುವ ನೋಂದಣಿ ಪತ್ರ.
5. ವಾಣಿಜ್ಯ ಇಲಾಖೆಯಿಂದ ಪಡೆದ ಸೇವಾ ತೆರಿಗೆ ಹಾಗೂ ಜಿ.ಎಸ್.ಟಿ ಸರ್ಟಿಫಿಕೇಟ್.
6. 2023-24, 2024-25 ಮತ್ತು 2025-26 ನೇ ಆರ್ಥಿಕ ವರ್ಷಗಳಲ್ಲಿ ಆದಾಯ ತೆರಿಗೆ ತುಂಬಿದ ಪತ್ರ.
7. ರಾಜ್ಯ ವಾಣಿಜ್ಯ ತೆರಿಗೆ ಇಲಾಖೆಯಲ್ಲಿ ವೃತ್ತಿ ತೆರಿಗೆ ಬಗ್ಗೆ ಚಾಲ್ತಿಯಲ್ಲಿರುವ ನೊಂದಣಿ ಪತ್ರ.
8. ಪಾನ್ ಕಾರ್ಡ್.
9. ಕಳೆದ 2 ವರ್ಷಗಳಲ್ಲಿ ಯಾವುದಾದರೂ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸಿರುವುದರ ಬಗ್ಗೆ ಅನುಭವ ಪ್ರಮಾಣ ಪತ್ರ ಸಲ್ಲಿಸತಕ್ಕದ್ದು.
10. ಇತ್ತೀಚಿನ ಕೆಳಕಂಡಂತೆ ಪಾವತಿಗೆ ಸಂಬಂಧಪಟ್ಟ ಚಲನ್ ಪ್ರತಿಗಳನ್ನು ಸಲ್ಲಿಸತಕ್ಕದ್ದು.
    - ಸೇವಾ ತೆರಿಗೆ ಪಾವತಿ.
    - ಭವಿಷ್ಯ ನಿಧಿ(PF**)**
    - ಕಾರ್ಮಿಕ ರಾಜ್ಯ ವಿಮೆ(ESI)
    - GST challan.
    - Professional Tax Challan.

11. ಸರ್ಕಾರದ ಅಧಿಸೂಚನೆ ಅನ್ವಯ ಕರ್ನಾಟಕ ಖಾಸಗಿ ಭದ್ರತಾ ಎಜೆನ್ಸಿ ನಿಯಮಗಳು 2008 (**Karnataka Private Security Agencies Rules 2008**)ರ ಅನ್ವಯ ಸಂಬಂಧಪಟ್ಟ ಪೊಲೀಸ್ ಕಛೇರಿಯಿಂದ ಪಡೆದ ಪ್ರಮಾಣ ಪತ್ರ ಸಲ್ಲಿಸತಕ್ಕದ್ದು.
12. ಕನಿಷ್ಟ 3 ತಿಂಗಳ ಬ್ಯಾಂಕ್ ಖಾತೆಯ ವಿವರವನ್ನು ಸಲ್ಲಿಸಬೇಕು.
13. ವ್ಯವಸ್ಥಾಪಕ ನಿರ್ದೇಶಕರು/ಸಂಘದ ಆಡಳಿತ ಮಂಡಳಿ ಸೂಚಿಸುವ ಹೆಚ್ಚುವರಿ ದಾಖಲೆಗಳನ್ನು ಒದಗಿಸುವುದು.

## ಬಿಡ್‌ನಲ್ಲಿ ಸಲ್ಲಿಸಬೇಕಾದ ವಿವರಗಳು:

1. ಟೆಂಡರ್ ಫಾರಂನಲ್ಲಿ ಟೆಂಡರ್ ಸಲ್ಲಿಸಿದ ವ್ಯಕ್ತಿ/ಸಂಸ್ಥೆಯ ಹೆಸರು, ವಿಳಾಸ, ದೂರವಾಣಿ ಸಂಖ್ಯೆ ಕಡ್ಡಾಯವಾಗಿ ನಮೂದಿಸಿರಬೇಕು.
2. ಬಿಡ್‌ನಲ್ಲಿ ಸೇವಾ ಶುಲ್ಕವನ್ನು ನಮೂದಿಸಿ ಸಲ್ಲಿಸಬೇಕು. ಬಿಡ್‌ನಲ್ಲಿ ಟೆಂಡರ್‌ದಾರರು ನಮೂದಿಸುವ ಸಂಖ್ಯೆ ಹಾಗೂ ಅಕ್ಷರಗಳಲ್ಲಿ ಏನಾದರೂ ಬದಲಾವಣೆ ಇದ್ದಲ್ಲಿ ಕಮಿಟಿಯು ಎಲ್ಲಾ ರೀತಿಯ ಮಾನದಂಡಗಳ ಆಧಾರದ ಮೇಲೆ ನಿರ್ಧರಿಸಲಾಗುವುದು.

## ಟೆಂಡರ್ ತೆರೆಯುವ ಮತ್ತು ಮೌಲ್ಯ ಮಾಪನ ಮಾಡುವುದು:

1. ಟೆಂಡರ್ ನಿಬಂಧನೆಗಳು ಮತ್ತು ಟೆಂಡರ್‌ದಾರರು ಒದಗಿಸುವ ದಾಖಲೆಗಳನ್ನು ಪರಿಶೀಲಿಸಿ ಮೌಲ್ಯಮಾಪನ ಮಾಡಲಾಗುವುದು.
2. ಎಲ್ಲಾ ರೀತಿಯಲ್ಲೂ ಸರಿಯಾಗಿರುವ ಬಿಡ್ ಮಾತ್ರ ಒಪ್ಪಿಕೊಂಡು ಅವುಗಳಿಗೆ ಸಂಬಂಧಿಸಿದಂತೆ ಬಿಡ್‌ಗಳನ್ನು ತೆರೆಯಲಾಗುವುದು.
3. ಟೆಂಡರ್‌ನ ಆಯ್ಕೆ ಮಾಡುವುದು, ತಿರಸ್ಕರಿಸುವುದು ಮತ್ತು ಒಪ್ಪಿಕೊಳ್ಳುವ ಅಂತಿಮ ತೀರ್ಮಾನ ಸಂಪೂರ್ಣವಾಗಿ ಆಡಳಿತ ಮಂಡಳಿಯದ್ದಾಗಿರುತ್ತದೆ.

ಹೆಚ್ಚಿನ ವಿವರಗಳು ಹಾಗೂ ಹೆಚ್ಚಿನ ಮಾಹಿತಿಗಾಗಿ ತೋಟ ಉತ್ಪನ್ನಗಳ ಮಾರಾಟ ಸಹಕಾರ ಸಂಘ ನಿ., ಚನ್ನಗಿರಿ ಇಲ್ಲಿ ಕಛೇರಿ ವೇಳೆಯಲ್ಲಿ ಸಂಪರ್ಕಿಸುವುದು.